# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 264/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಭವ್ಯ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಶಿವಕುಮಾರ್ | | **30.12.2024** |
| ವಯಸ್ಸು | ಃ 30 ವರ್ಷ | | |
| ವೃತ್ತಿ | ಃ ಗಾರ್ಮೆಂಟ್ಸ್ ಕೆಲಸ | ಪ್ರಾ.ಸಾ. | ಃ 08 |
| ವಾಸಸ್ಥಳ | ಃ ಬೆಂಗಳೂರು | ಚಾ.ಸಾ. | ಃ 09 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ನನ್ನ ತಾಯಿಯ ಮನೆಯಿದೆ. ನನ್ನ ತಂದೆ ತಾಯಿಗಳಿಗೆ ನಾವು *4* ಜನ ಮಕ್ಕಳು. ನಮ್ಮ ಮನೆಯ ಪಕ್ಕದಲ್ಲಿ ನಮ್ಮ ದೊಡ್ಡಮ್ಮ ಮಹದೇವಮ್ಮ ಇವರ ಮನೆಯಿದೆ. ಆ ಮಹದೇವಮ್ಮ ಇವರ ಮನೆಯ ಒಂದು ಭಾಗವವನ್ನು ಬಾಡಿಗೆಗೆ ಕೊಟ್ಟಿರುತ್ತಾರೆ. ಈಗ ಒಂದು ವರ್ಷದ ಹಿಂದೆ ನಾನು ನನ್ನ ಗಂಡನ ಮನೆಯಿಂದ ತಾಯಿಗೆ ಮನೆಗೆ ಬಂದಿದ್ದೆ ಆ ಕಾಲಕ್ಕೆ ನಾನು ಮನೆಯ ಒಳಗೆ ಮಲಗಿಕೊಂಡಿದ್ದಾಗ ಮನೆಯ ಹೊರಗೆ ಕಿರುಚಾಡುವ ಶಬ್ದ ಕೇಳಿ ಹೊರಗೆ ಬಂದಿದ್ದೆ. ನಾನು ಹೊರಗಡೆ ಬಂದಾಗ ಮಹದೇವಮ್ಮ ಇವರ ಮನೆಯಲ್ಲಿ ಬಾಡಿಗೆಗೆ ಇದ್ದ ವ್ಯಕ್ತಿಯ ಮಗಳನ್ನು ಆಟೋದಲ್ಲಿ ಹಾಕುತ್ತಿದ್ದರು ಮತ್ತು ಮನೆಯ ಹೊರಗಡೆ ರಕ್ತ ಚೆಲ್ಲಿತ್ತು ಅದನ್ನು ನೋಡಿ ನನಗೆ ತಲೆ ಸುತ್ತು ಬಂದಿತ್ತು. ಅಷ್ಟರಲ್ಲಿ ನಾನು ಮನೆಯ ಒಳಗಡೆ ಹೋಗಿದ್ದೆ. ಆ ಕಾಲಕ್ಕೆ ನನಗೆ ಈಗ ವಿಸಿ ಅಲ್ಲಿ ತೋರಿಸುತ್ತಿರುವ ಆರೋಪಿತನನ್ನು ನಾನು

ನೋಡಿಲ್ಲ. ನಂತರ ನನ್ನ ತಾಯಿ ಹೇಳಿದ್ದರಿಂದ ಬಾಡಿಗೆಗೆ ಇದ್ದ ಮನೆಯಲ್ಲಿನ ಹುಡುಗಿಯ ಕೊಲೆಯಾಗಿದೆ ಎಂದು ಗೊತ್ತಾಗಿದೆ ಆದರೆ ಕೊಲೆಯಾಗಿದ್ದನ್ನು ನಾನು ನೋಡಿಲ್ಲ. ಪೊಲೀಸರು ಮುಂದೆ ಮಾದೇಶ ಹರ್ಷಿತಾಳಿಗೆ ಚಾಕುವಿನಿಂದ ಚುಚ್ಚಿದ್ದನ್ನು ನೋಡಿದ್ದೆ ಎಂದು ಹೇಳಿಕೆ ಕೊಟ್ಟಿಲ್ಲ. ನನ್ನ ಸಹೋದರಿ ಸಂಗೀತಾ ನನ್ನ ತಾಯಿಯ ಮನೆಯಲ್ಲೇ ಇದ್ದಳು ಮತ್ತು ಆ ಘಟನೆ ಕಾಲಕ್ಕೂ ಸಹ ಅಲ್ಲಿಯೇ ಇದ್ದರು ಎಂದರೆ ನಿಜ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಮಹದೇವಮ್ಮ ಇವರ ಮನೆಯಲ್ಲಿ ಬಾಡಿಗೆಗೆ ಇದ್ದ ಗೀತಾ ಇವರ ಮಗಳು ಹರ್ಷಿತಾ ನನಗೆ ಪರಿಚಯ ಇದ್ದಳು ಎಂದರೆ ನಿಜ. ಗೀತಾ ಇವರಿಗೆ ಲೊಕೇಶ ಎನ್ನುವವರ ಜೊತೆ ಮದುವೆಯಾಗಿದೆ ಮತ್ತು ಸುಮಾರು ವರ್ಷಗಳ ಹಿಂದೆ ಅವರು ಬೇರೆ ಬೇರೆಯಾಗಿ ಲೊಕೇಶ ಚಿನಕುರಳಿಯಲ್ಲಿ ವಾಸವಾಗಿದ್ದಾನೆ ಎಂದು ನನ್ನ ಮುಂದೆ ಗೀತಾ ಹೇಳಿದ್ದಳು ಎಂದರೆ ಸರಿಯಲ್ಲ. ದಿಃ*15.07.2023* ರಂದು ಮದ್ಯಾಹ್ನ *11.30* ರಿಂದ *12* ಗಂಟೆಗೆ ನಾನು, ನನ್ನ ತಂಗಿ ಸಂಗೀತಾ ನಮ್ಮ ಮನೆಯ ಮುಂದೆ ಹಾಕಿದ್ದ ಸಿಮೆಂಟ್ ಇಟ್ಟಿಗೆಯ ಮೇಲೆ ಕುಳಿತು ಮಾತನಾಡುತ್ತಾ ಇದ್ದಾಗ ಮೃತ ಹರ್ಷಿತಾ ಸಹ ಅಲ್ಲಿಗೆ ಬಂದು ನಮ್ಮೊಂದಿಗೆ ಕುಳಿತುಕೊಂಡು ತನ್ನ ಗಂಡ ಬಂದಿರುವುದಾಗಿಯೂ ತನ್ನನ್ನು ಜೊತೆಯಲ್ಲಿ ಬರುವಂತೆ ಒತ್ತಾಯ ಮಾಡುತ್ತಿರುವುದಾಗಿಯೂ ತಾನು ಈಗಲೇ ಬರುವುದು ಇಷ್ಟವಿಲ್ಲ ಎಂದು ಹೇಳಿದರೂ ಬಿಡುತ್ತಿಲ್ಲ ಎಂದು ಹೇಳಿಕೊಂಡು ಕುಳಿತಿದ್ದಳು ಎಂದರೆ ಸರಿಯಲ್ಲ. ಆ ಕಾಲಕ್ಕೆ ಗೀತಾ ಬಟ್ಟೆ ಒಣಗಿಹಾಕುತ್ತಿದ್ದಳು ಮತ್ತು ಸ್ವಲ್ಪ

ಸಮಯದ ಬಳಿಕ ಮತ್ತೊಬ್ಬ ವ್ಯಕ್ತಿ ಅಲ್ಲಿಗೆ ಬಂದಿದ್ದ ಮತ್ತು ಹರ್ಷಿತಾ ಇತನೇ ನನ್ನ ಗಂಡ ಮಾದೇಶ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ಅಷ್ಟರಲ್ಲಿ ಮಾದೇಶ ಹರ್ಷಿತಾಳನ್ನು ತನ್ನೊಂದಿಗೆ ಬರುವಂತೆ ಕರೇದಾಗ ಹರ್ಷಿತಾ ನಾನು ಈಗಲೇ ನಿನ್ನ ಬರುವುದಿಲ್ಲ ನಿಮ್ಮ ಅಕ್ಕ,ಭಾವ ಮತ್ತು ಅಮ್ಮನನ್ನು ಕರೆದುಕೊಂಡು ಬಾ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ಆ ವೇಳೆಗೆ ಮಾದೇಶ ನಾನು ಎಷ್ಟು ಕರೆದರೂ ನೀನು ನನ್ನೊಂದಿಗೆ ಬರುತ್ತಿಲ್ಲ ನೀನು ಬದುಕಿದ್ದರೂ ಏನು ಪ್ರಯೋಜನ ಎಂದು ಹರ್ಷಿತಾಳ ಜುಟ್ಟು ಹಿಡಿದುಕೊಂಡು ಬ್ಯಾಗಿನಲ್ಲಿದ್ದ ಚಾಕುವನ್ನು ತೆಗೆದು ಹರ್ಷಿತಾಳ ಹೊಟ್ಟೆ ಮತ್ತು ಕತ್ತಿಗೆ ಚುಚ್ಚುತ್ತಿದ್ದಾಗ ನಾವು ಭಯದಿಂದ ಕಿರುಚಿಕೊಂಡಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಬಟ್ಟೆ ಒಣ ಹಾಕುತ್ತಿದ್ದ ಗೀತಾ ರವರು ಮಾದೇಶ ಹರ್ಷಿತಾಳಿಗೆ ಚುಚ್ಚುತ್ತಿದ್ದ ಚಾಕುವನ್ನು ಕೈಯಿಂದ ಹಿಡಿದುಕೊಂಡಾಗ ಅವರ ಕೈಯಿಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. ಆಗ ನಾನು, ಗೀತಾ ಮತ್ತು ಸಂಗೀತಾ, ಮಾದೇಶನನ್ನು ಬಿಡಿಸಿದ್ದರೂ ಸಹ ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಮ್ಮ ಕೂಗಾಟ ಕೇಳಿ ಬೇರೆ ಇಬ್ಬರು ವ್ಯಕ್ತಿಗಳು ಅಲ್ಲಿಗೆ ಬಂದಿದ್ದರು ಮತ್ತು ಅವರು ಮಾದೇಶನಿಗೆ ಹರ್ಷಿತಾಳನ್ನು ಬಿಡುವಂತೆ ಹೇಳಿದಾಗ ಮಾದೇಶ ಬಿಡದೇ ಇದ್ದಾಗ ಆ ಪೈಕಿ ಒಬ್ಬ ವ್ಯಕ್ತಿ ಮಾದೇಶನಿಗೆ ಮುಖಕ್ಕೆ ಕೈಯಿಂದ ಹೊಡೆದ ಎಂದರೆ ಸರಿಯಲ್ಲ. ನಂತರ ಮಾದೇಶ ಕೆಳಕ್ಕೆ ಬಿದ್ದಿದ್ದ ಮತ್ತು ಹರ್ಷಿತಾಳ ಹೊಟ್ಟೆಗೆ ಚುಚ್ಚಿತ್ತು ಮತ್ತು ಅದನ್ನು ಹರ್ಷಿತಾ ಕಿತ್ತು ಹಾಕಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿ ಯಾರೋ ಆಟೋ ತಂದಿದ್ದ ಆ ಆಟೋದಲ್ಲಿ ಹರ್ಷಿತಾಳನ್ನು ಎತ್ತಿ ಹಾಕಿಕೊಂಡು ಗೀತಾ ಮತ್ತು ಸಂಗೀತಾ ಆಸ್ಪತ್ರೆಗೆ ಹೊಗಿದ್ದರು ಎಂದರೆ ಸರಿಯಲ್ಲ. ನಂತರ ಅಕ್ಕಪಕ್ಕದವರು ಸೇರಿ ಮಾದೇಶನನ್ನು ಹಿಡಿದುಕೊಂಡಿದ್ದೆವು ಮತ್ತು ಆತನನ್ನು ಪೊಲೀಸರು ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಆ ಬಳಿಕ ಗೀತಾ ನನಗೆ

ಫೋನ್ ಮಾಡಿ ಹರ್ಷಿತಾ ಮೃತ ಪಟ್ಟ ಬಗ್ಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಹರ್ಷಿತಾ ತಾಯಿಯ ಮನೆಯಲ್ಲಿ ಉಳಿದುಕೊಂಡಿದ್ದು ಮಾದೇಶ ಕರೆದರೂ ಹೋಗಲು ನಿರಾಕರಿಸಿದ್ದರಿಂದ ಮಾದೇಶ ಹರ್ಷಿತಾಳನ್ನು ಕೊಲೆ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈದಿನ ವಿ.ಸಿ ಯಲ್ಲಿ ಹಾಜರುಪಡಿಸಿರುವ ಆರೋಪಿತನೇ ಆ ಮಾದೇಶ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಗೀತಾ ರವರ -------- ನೀಡಿರುತ್ತೇನೆ ಎಂದು ನಾನು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*19* ಎಂದು ಗುರುತಿಸಿದೆ. ಈಗ ಆರೋಪಿತನಿಗೇ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀಮತಿ ಜ್ಯೋತಿ ರವರಿಂದಃ-

*3.* ನನ್ನ ಮಕ್ಕಳು ಈಗ ಮೈಸೂರಿನ ನನ್ನ ತಾಯಿಯ ಮನೆಯಲ್ಲೇ ವಾಸವಿದ್ದಾರೆ. ಆದರೆ ಅವರು ಮೈಸೂರಿನಲ್ಲಿದ್ದ ಬಗ್ಗೆ ಪೊಲೀಸರಿಗೆ ದಾಖಲೆ ಕೊಟ್ಟಿಲ್ಲ. ನನ್ನ ಗಂಡ ಮರಣಹೊಂದಿದಾಗಿನಿಂದ ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮರಣದ ಬಳಿಕ ನಾನು ಚಾಮರಾಜನಗರದಲ್ಲಿ ವಾಸವಿದ್ದೆ ಎಂದರೆ ಸರಿಯಲ್ಲ. ನನ್ನ ತಂಗಿ ಸಂಗೀತಾ ತನ್ನ ಗಂಡನ ಜೊತೆಯಲ್ಲಿ ವಾಸವಿದ್ದಾರೆ ಎಂದರೆ ನಿಜ. ಅವರು ಬಿ.ಎಂ.ಶ್ರೀ ನಗರದಲ್ಲಿ ವಾಸವಿದ್ದಾರೆ. ನನ್ನ ತಾಯಿ ಮನೆಯವರಿಗೂ ಮತ್ತು ಮಹದೇವಮ್ಮರವರಿಗೂ ಮಾತುಕತೆ ಇಲ್ಲ ಎಂದರೆ ನಿಜ. ಮಹದೇವಮ್ಮ ಇವರ ಮನೆಗೆ ಯಾರು ಬರುತ್ತಾರೆ ಮತ್ತು ಯಾರಿಗೆ ಬಾಡಿಗೆ ಕೊಟ್ಟಿದ್ದಾರೆ ಎಂದು ಗೊತ್ತಾಗುವುದಿಲ್ಲ ಎಂದರೆ ನಿಜ. *2023* ರ ಜುಲೈ ತಿಂಗಳಿನಲ್ಲಿ ಆ ಮನೆಯಲ್ಲಿ ಯಾರು ವಾಸವಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮರಣಹೊಂದಿದಾಗ ನಾನು ನನ್ನ ತಾಯಿಯ ಮನೆಗೆ ಬಂದಾಗ ಬೇಜಾರಿನಿಂದ

ಇದುದ್ದರಿಂದ ಅಕ್ಕಪಕ್ಕದವರನ್ನು ಮಾತನಾಡಿಸುತ್ತಿರಲಿಲ್ಲ ಎಂದರೆ ನಿಜ. ನಾನು ಆ ಘಟನೆ ಬಗ್ಗೆ ಪೊಲೀಸರ ಮುಂದೆ ಯಾವುದೇ ಕೊಟ್ಟಿಲ್ಲ. ನಾನು ಹೆಚ್ಚಾಗಿ ನನ್ನ ಗಂಡನ ಅಜ್ಜಿ ಮನೆಯಾದ ಚಾಮರಾಜನಗರದಲ್ಲಿ ವಾಸವಿರುತ್ತಿದ್ದೆ ಎಂದರೆ ನಿಜ. ನಾನು ಮನೆಯಲ್ಲಿ ಮಲಗಿದ್ದಾಗ ಕಿರುಚುವ ಶಬ್ದ ಕೇಳಿ ಹೊರಗಡೆ ಬಂದು ನೋಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಮನೆಯಿಂದ ಆಚೆ ಬಂದಾಗ ಮಹದೇವಮ್ಮನ ಮನೆಯಲ್ಲಿ ಬಾಡಿಗೆಗೆ ಇದ್ದ ಹುಡುಗಿಯನ್ನು ಆಟೋದಲ್ಲಿ ಕರೆದುಕೊಂಡು ಹೋಗುವುದನ್ನು ನೋಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಆಟೋವನ್ನು ಮಾತ್ರ ನೋಡಿದ್ದೇನೆ. ನಾನು ಆಟೋವನ್ನು ಸಹ ನೋಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಮನೆಯಲ್ಲಿ ಮಲಗಿದ್ದ ವಿಚಾರ ಮಾತ್ರ ಹೇಳಿದ್ದೆ ಎಂದರೆ ನಿಜ. ನನ್ನ ತಾಯಿ ಕೊಲೆಯಾಗಿದ್ದ ಬಗ್ಗೆ ಹೇಳಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿ ಸಂಗೀತಾ ನನ್ನ ತಾಯಿಯ ಮನೆಯಲ್ಲಿ ಇದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು